Doc-486
T-P-2

Reg No B G 155 29 — 5 — 72

55th Year of Publication ‘Satyavadi’ daily, Mysore 4

In the Sta'e – The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಮನೆಮನಗಳಲ್ಲಿ
ಸಂಚಲನ ಉಂಟುಮಾಡಿದ
ಪತ್ರಿಕೆ

ಸ್ಥಾಪಕರು: ಆರಮನೆ ಪರಸ್ಪೈದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭೂಮಿಗೆ ಪೇಟೆ ಧಾರಣೆ ಕೊಡುವುದಿಲ್ಲ

ಅಹಿಂಸಾ ಪಿಕೆಟಿಂಗ್

ಸಾಮಾಜಿಕ ಕೆಡಕು ಹಾಗೂ ಮೂಢ ಆಚಾರ ಇವೆನ್ನು ತೊಡೆಯಲು ತಮಿಳ್ನಾಡಿನ ಆರು ಮುಖ್ಯ ದೇವಾಲಯಗಳೆದುರು ಅಹಿಂಸಾ ಪಿಕೆಟಿಂಗ್ ಏರ್ಪಡಿಸುವುದಾಗಿ ದ್ರವಿಡ ಕಜಗಂ ನಾಯಕ ಶ್ರೀ ಇ ವಿರಾಮಸ್ವಾಮಿ ನಾಯಕ್ಕರು ನುದಂಗಾಸಿನಲ್ಲಿ ತಿಳಿಸಿದರು

★

ಹೊಸ ಪಕ್ಷ

ಪಾಟ್ನಾದಿಂದ ಬಂದಿರುವ ವರದಿ ಪ್ರಕಾರ, ಅಖಿಲ ಭಾರತೀಯ ಜನಸಂಘದಿಂದ ಪ್ರತ್ಯೇಕವಾದ ತಂಡ ರಾಷ್ಟ್ರೀಯ ಜನ ಸಂಘ ಸ್ಥಾಪಿಸಿದೆ

★

ಕುದುರೆ ಲದ್ದಿಯ ಕಲ್ಲಿಣ ಅದುರಿನ ಗಣಿ

ಕುದುರೆಮುಖ ಕಬ್ಬಿಣ ಅದುರಿನಗಣಿ ಯೋಜನೆಯ ಸವಿವರ ವರದಿಯನ್ನು ಭಾರತ ಸರ್ಕಾರದ ಅಂತರ ಸಚಿವ ಶಾಖೆ ತಂಡವೊಂದು ಪರಿಶೀಲನೆ ಮಾಡುತ್ತಿದೆ

★

ಆಕ್ರಮ ಸಾರಿಗೆ ವಸ್ತು ಪತ್ತೆ

ಮೈಸೂರು ವಲಯದ ಕೇಂದ್ರ ಅಬಕಾರಿ ಸುಂಕ ಅಧಿಕಾರಿಯವರು ಹಿಂದಿನ ಮಾಸದಲ್ಲಿ 2.10 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾದ ಬೆಲೆಯ ಆಕ್ರಮ ಸಾಗಾಣಿಕೆ ವಸ್ತುವನ್ನು ವಶಪಡಿಸಿಕೊಂಡರು

★

ರೂ 20 ರ ನೋಟು

ಬೊಂಬಾಯಿ— ರಿಜರ್ವ್ ಬ್ಯಾಂಕು ಮುಂದಿ ತಿಂಗಳಿಂದ ರೂ. 20 ರ ನೋಟುಗಳನ್ನು ಹೊರಡಿಸಲಿದೆ.

★

ಖೂನಿಗಳು

ಬೆಂಗಳೂರು— ರಾಜ್ಯದಲ್ಲಿ ಕಳೆದ ತಿಂಗಳಲ್ಲಿ 66 ಖೂನಿಗಳಾಗಿವೆ

ತಿರಸ್ಕರಣ

ನವದೆಹಲಿಯಿಂದ ಬಂದಿರುವ ವರದಿಯಂತೆ, ಭೂಮಿತಿ ಜಾರಿ ಮಾಡಿದನಂತರ ಉಳಿಯುವ ಭೂಮಿಗೆ ಪರಿಹಾರವಾಗಿ ಪೇಟೆ ಧಾರಣೆ ಕೊಡುವುದಕ್ಕೆ ರಾಷ್ಟ್ರೀಯ ಬೇಸಾಯ ಆಯೋಗ ತಿರಸ್ಕರಿಸಿದೆ

★

ಚಿತ್ರಮಂದಿರ ದಹನ

ಬೆಂಗ್ಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಒಂದು ಟೂರಿಂಗ್ ಟಾಕೀಸ್‌ಗೆ ಬೆಂಕಿಬಿದ್ದು ಅದು ದಹನ ಆಯಿತು

○

ಹಾವು ಕಡಿತಕ್ಕೆ ಔಷಧಿ

ಅಲಹಾಬಾದಿನ ಇಬ್ಬರು ಮುಸ್ಲಿಂ ಸಹೋದರರಲ್ಲಿ ಹಾವು ಕಡಿತಕ್ಕೆ ಖಾತರಿ ಗುಣಕಾರಿ ಅದ್ಭುತ ಔಷಧವಿರುವಂತಿದೆ ದಿಲ್ವಾರಪುರ ಗ್ರಾಮದಲ್ಲಿ ಗುರುವಾರ ಓರ್ವ ಹುಡುಗಿ ಭಾರಿ ವಿಷ ಸರ್ಪದಿಂದ ಕಡಿಯಲ್ಪಟ್ಟು, ಅಲಹಾಬಾದಿಗೆ ತರುವದರಲ್ಲಿ ಹುಡುಗಿಯು ನಿರ್ಜೀವವಾಗಿದ್ದಂತೆ ಕಂಡಿತು. ಆಗ ಅವಳ ಸಹೋದರ ಅಬ್ದುಲ್ಲ ಎಂಬಾತನು ಕೆಂಪು ಹರ್ಣದ ನೀರು ವಸ್ತುವನ್ನು ಬಲವಂತವಾಗಿ ಬಾಯಿಗೆ ಹಾಕಿಡನು ಆಶ್ಚರ್ಯಕರವಾಗಿ 15 ನಿಮಿಷದಲ್ಲಿ ಅವಳಿಗೆ ಜೀವಬಂತು ಔಷಧಿ ರಹಸ್ಯ ತಿಳಿಸಲು ಅವರು ನಿರಾಕರಿಸಿದರು

★

ಶೃಂಗಸಭೆ

ನವದೆಹಲಿ— ಪಾಕ್ ಅಧ್ಯಕ್ಷ ಭುಟ್ಟೋ ಶೃಂಗ ಸಭೆಯಲ್ಲಿ ಭಾಗವಹಿಸಲು ಜೂನ್ 28 ರಂದು ಬರಲಿರುವರು ; ಸಭೆ 3 ದಿನಗಳು ನಡೆಯುವ ಸಂಭವವಿದೆ.

★

★ ಬೊಂಬಾಯಿನಲ್ಲಿ ಪತ್ರಿಕೆ ಮಾರುವವರು ಮುಷ್ಕರ ಹೂಡಿದ್ದರಿಂದ ಅಲ್ಲಿನ ಸುತ್ತಮುತ್ತ ಜನರಿಗೆ ಪತ್ರಿಕೆ ಸಿಗಲಿಲ್ಲ

ಒಲಂಪಿಕ್ ಕ್ರೀಡೆಗಳು

ಮ್ಯೂನಿಚ್ (ಜರ್ಮನಿ)— ಮ್ಯೂನಿಚ್ ನಗರದಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಒಲಂಪಿಕ್ ಕ್ರೀಡಾ ವಿಭಾಗಕ್ಕೆ ಈಗಾಗಲೆ ಪ್ರಪಂಚದ ಅನೇಕ ರಾಷ್ಟ್ರಗಳಿಂದ ವಿಶೇಷವಾದ ವಸ್ತುಗಳೂ ಹಣವೂ ಉದಾರವಾಗಿ ಬಂದಿವೆ. ಈಗಾಗಲೇ ಬಂದಿರುವ ವಸ್ತುಗಳ ಬೆಲೆಯು 41.3 ಮಿಲಿಯ ಡಿ.ಎಂ ಗಳಷ್ಟಾಗಿವೆ ಮೂರೂವರೆ ವರ್ಷಗಳ ಹಿಂದೆ ನಿರೀಕ್ಷಿಸಿದ್ದ 16 ಮಿಲಿಯ ಡಿ.ಎಂ ಗಳ ಮಿತಿಯನ್ನು ಮೀರಿಸಿದೆ. ಉದಾರವಾಗಿ ಬಂದಿರುವ ವಸ್ತುಗಳಲ್ಲಿ ಎರಡು ಮಿಲಿಯ ಕಾಗದದ ಹಳೆಗಳೂ, 8000 ಪೌಂಡುಗಳಷ್ಟು ಹಾಲುಕೆನೆಯೂ ಹಾಲೆಂಡಿನಿಂದಲೂ, 200 ಬೈಸಿಕಲ್‌ಗಳು ಅಮೆರಿಕಾ ಸಂಯುಕ್ತ ರಾಷ್ಟ್ರದಿಂದಲೂ, ಆಸ್ಟ್ರೇಲಿಯಾದಿಂದ ಡಿಂಡ್ರಲ್ ಉದುಸಿನ ಬಟ್ಟೆಗಳೂ, ಡೆನ್ಮಾರ್ಕಿನಿಂದ ಆಫ್‌ಸೆಟ್ ಯಂತ್ರಗಳೂ, ಜಪಾನಿನಿಂದ ಶಬ್ದಕೋಶಗಳೂ ಬಂದಿವೆ. ಈಗಾಗಲೇ ಲಕ್ಷಾಂತರ ಕೋಲಾ ಪಾನೀಯದ ಬಾಟಲುಗಳೂ ಸಂಗ್ರಹಿತವಾಗಿವೆ ; ಜಾವಲಿನ್, ಚಾಕೊಲೆಟ್ ಬಾರುಗಳೂ, 11 ಟನ್‌ಗಳಷ್ಟು ಉಪ್ಪು ಕೂಡಾ ಬಂದಿವೆ ; ಅಂತೆ ಹೆಲಿಕ್ಯಾಪ್ಟರುಗಳೂ, ಒಂದು ಕಂಪ್ಯೂಟರೂ, 5000 ಟೈಪುರೈಟರುಗಳೂ ಸೇರಿವೆ: ಮಿಕ್ಕೆ ಎಲ್ಲಾ ಯಂತ್ರೋಪಕರಣಗಳ ಜೋಡಿಕೆಯೂ ಪ್ರಕ್ರಮವಾಗಿ ಪೂರ್ಣವಾಗಿದೆ ; ಇವೂ ಅಲ್ಲದೆ 50000 ಬಟ್ಟೆಹಾಂಗರುಗಳೂ 6000 ಆಷ್ಟ್ರೇಗಳೂ, 4000 ಚೀಲ ಶುದ್ಧ ಹಸುವಿನ ಸಗಣಿ ಸಹ ಕ್ರೀಡಾ ಮೈದಾನನ್ನು ಸಾರಿಸಲೂ ಸಿದ್ಧವಾಗಿದೆ ; ಒಟ್ಟಿನಲ್ಲಿ 50300 ಜನರು ಅಲ್ಲಿ ತಂಗಿ ಕ್ರೀಡೆಯಲ್ಲಿ ಭಾಗವಹಿಸಲು ಸಕಲ ಸಿದ್ಧತೆಗಳೂ ನೆಡೆ ಸೇರಿವೆ (ಯೂ ಪಿ ಎಸ್)

★

ಮೂವರ ಬಂಧನ

ಕೆಲವು ಕದ್ದ ಮಾಲನ್ನು ಮಾರುತ್ತಿದ್ದ ಆಪಾದನೆಯ ಮೇಲೆ ಮೂವರನ್ನು ಪೋಲಿಸರು ಬಿಜಾಪುರದಲ್ಲಿ ಬಂಧಿಸಿದರು

ವೈಸೂರು ಡಿ. ಸುಬ್ಬಯ್ಯಾ ಕಸ್ತೂರಿಯವ
ಡಾ|| ಬಿ. ಜಿ. ದಾಸ್‌ರವರ ಹೊಸ ಫೋರ್
ನಂ. 23142

ವಿದೇಶೀ ವಿನಿಮಯ

ಭಾರತ ಉಪಖಂಡಕ್ಕೆ ಆಕ್ರಮ ಸಾಗಾಣಿಕೆಯ ಚಿನ್ನ, ಗಡಿಯಾರಗಳು, ಬಟ್ಟೆಗಳು ತೋಹದ ನೂಲು, ಮತ್ತಿತರ ವಿದೇಶೀ ಬಳಿಕೆ ವಸ್ತುಗಳು ತಪ್ಪದೆ ನಿರಂತರವಾಗಿ ಬರುತ್ತಿರುವುದರಿಂದ ಅನೇಕಕೋಟಿ ವಿದೇಶೀ ವಿನಿಮಯ ನಷ್ಟವಾಗುತ್ತಿದೆ – ಇದಕ್ಕೆ ಜೊತೆಗೆ ವಿದೇಶಗಳಿಗೆ ಭಾರತ ಚಲನಚಿತ್ರಗಳ ಆಕ್ರಮ ಸಾಗಾಣಿಕೆಯಿಂದ ರೂ. 7 ಕೋಟಿಯಷ್ಟು ನಷ್ಟವಾಗುತಿದೆ.

●

ವಿಂಚಿನಿಂದ ಸಾವು

ಬೆಂಗಳೂರು– ಚನ್ನಪಟ್ಟಣದ ಅಕ್ಕೂರು ಗ್ರಾಮದಲ್ಲಿ ವಿಂಚಿನ ಹೊಡೆತದಿಂದ ಇಬ್ಬರು ಸತ್ತರು.

○

ಪುರಸಭೆ

ಮೈಸೂರು— ಈ ಮಾಹೆಯ ಸಾಧಾರಣ ಪುರಸಭಾಧಿವೇಶನವು ತಾ|| 31 ಬುಧವಾರ ಮಧ್ಯಾಹ್ನಾತ್ಪರ 4 ಘಂಟೆಗೆ ನಡೆಯುವುದಾಗಿದೆ.

★

ನಿಧನ

ಚಿತ್ರ ನಟ ಪೃಥ್ವಿರಾಜ ಕಪೂರರು ನಿಧನಂಡರು

★

ಹೊಸ ಕಾಂಗ್ರೆಸಿಗೆ ಸೇರಿದ ಶಾಸಕಿ ಶ್ರೀಮತಿ ಅನಂತನಾಯಕಿ ಮನೆಯಂ ಎದುರಿಗೆ ಪ್ರದರ್ಶನ ಮಾಡಿದ 150 ಹಳೆಯ ಕಾಂಗ್ರೆಸಿಗರು ಬಂಧಿತರಾದರೆಂಬು ಮುಖ್ಯ ವಾರ್ತೆ

ಶಾಸನಸಭೆಯಲ್ಲಿನ ಅಪರಾಧಗಳ ವಿಚಾರಣೆ

ಕೇರಳದ ಶಾಸನಸಭೆಯಲ್ಲಿ 1970 ನೇ ಮೇ 29 ರಲ್ಲಿ, ಪೋಲೀಸು ಇನ್ಸ್ಪೆಕ್ಟರು ಶ್ರೀ ಶಂಕರನಾರಾಯಣ ನಾಯರ್ ಸ್ಪೆಷಲ್ ಡ್ಯೂಟಿ ಮೇಲಿದ್ದರು. ಸಭೆಯಲ್ಲಿ ಗೊಂದಲವಾಗಲು, ಅವರು ಸ್ಪೀಕರರ ವೇದಿಕೆ ಹತ್ತಿರಕ್ಕೆ ನುಗ್ಗಿದರು. ಅವರನ್ನು ಸಾರಿಗೆ ಮಂತ್ರಿ ಶ್ರೀ ಇಬೀಚಿ ಬಾವ, ಮತ್ತು ಶಾಸಕರು ಶ್ರೀಗಳಾದ ಸಿ. ಬಿ. ವಾರಿಯರ್, ಇ. ಎಂ. ಜಾರ್ಜ್, ಮತ್ತು ಆರಾನಾರಪರನ್ನು ಹೊಡೆದುದಾಗಿ ವರದಿಯಾಗಿತ್ತು. ಇವರ ಫಿರ್ಯಾದನ್ನು ಕೆಳಕೋರ್ಟು ವಜಾಮಾಡಿತ್ತು ; ಅಪೀಲಿನಲ್ಲಿ ಜಿಲ್ಲಾಧಿಕಾರಿಗಳು, ಸಭೆಯೊಳಗೆ ವ್ಯಕ್ತಿಯಿಂದ ನಡೆಸಲಾದ ಅಪರಾಧ ಕಾರ್ಯಗಳು ಸಭೆಯ ಕಾರ್ಯಕಲಾಪದ ಭಾಗವೇದು ಭಾವಿಸಲಾಗುವುದಿಲ್ಲವೆಂದು ತಿಳಿಸಿ, ಕೆಳಕೋರ್ಟಿನ ಆಜ್ಞೆಯನ್ನು ರದ್ದುಪಡಿಸಿತು.

★

ಹರಿಜನರೆ ಸ್ವರ್ಗ

ತಮಿಳು ನಾಡುವಿತು ಹರಿಜನರಿಗೆ ಸ್ವರ್ಗವಾಗಿದೆ : ಅವರನ್ನು ಪವಿತ್ರ ಗೋವಿನಂತೆ ಕಾಣಲಾಗುತ್ತಿದೆ. ಗಾಂಧೀಜಿ ಸವರ್ಣ ಸವರ್ಣ ಹಿಂದೂಗಳ ದೇವಾಲಯವನ್ನು ಹರಿಜನರಿಗೆ ತೆರೆಯಲು ಕಾರ್ಯನಡೆಸಿದರೆ, ತಮಿಳುನಾಡು ಸರ್ಕಾರವು ದೇವಾಲಯಗಳ ಧರ್ಮದರ್ಶಿಗಳಿಗೆ ಮಂಡಲಿಯಲ್ಲಿ ಹರಿಜನರಿಗೆ 3 ನೇ ಒಂದು ಭಾಗ ಕಾದಿಡುವ ವ್ಯವಸ್ಥಾಪನೆಯನ್ನು ಮಾಡಲು ನಿರ್ಧರಿಸಿದೆ ; ಅಂಥವೆ ಹರಿಜನರಿಗೆ ದೇವಾಲಯುಗಳಿಗೆ ನಿರಾತ್ಕಂಕ ಪ್ರವೇಶದೊತ್ತೆತಂತಾಯಿತು, ಈ ವಾಲಯಗಳವಿಷಯಗಳಲ್ಲಿ ಹೇಳಿಕೆಗಳಿಗೆ ಅಪ್ಪದವಾಯಿತು. ಇಲ್ಲೀನರಿಗೆ ತಂಜಾವೂರು, ತಿರುನಲ್ವೆಲ್ಲಿ, ಸೇಲಂಗಳಲ್ಲಿ ಸವರ್ಣ ಹಿಂದೂಗಳಿಗೆ ಕಾದಿಡಲಾಗಿದ್ದ ಬೀಡಿಗಳಲ್ಲಿ ಹರಿಜನರ ಪ್ರವೇಶಕ್ಕೆ ಅವಕಾಶವಿರಲಿಲ್ಲ.

ವುಡ್‌ಲಾಂಡ್ಸ್ 26-5-72ರಿಂದ ಅಮೋಘ 4ನೇವಾರ

.... ಚಿತ್ತಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾಜಶ್ರೀ ಸಹೋದರರು ನಿರ್ಮಾಪಕರು : ಎಂ ಜಿ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಚಾದುರಂಗ

ಅಪೆರಾ 26 5 72 ರಿಂದ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ [ವಯಸ್ಕರಿಗೆ ಮಾತ್ರ]

ಜರೂರತ್

ಪಾತ್ರ– ಶ್ರೀನಿವಾಸ್, ವಿಜಯಲಕ್ಷ್ಮಿ ಅರೋರ, ಅಸಿತ್ ಸೇನ್, ಪುನಪೆಹಾನ ಕೃಷ್ಣ
ಜಾನಿ ವಿಸ್ಕಿ, ಡಾನಿಡೆ ಜೊಪ್ಪ
ನಿರ್ದೇಶನ– ಬಿ ಆರ್. ಇಶಾರ ಸಂಗೀತ–ಬ್ರಿಜ್ ಭೂಷಣ್
ದಿನ 3 ಆಟಗಳು

Protect the Cow

SHAKTI SUDHA

A Superb Tonic

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore 4